

ಅರವಿಂದ ಶಶಿ

ಮುರಿಯುವ ಯಶೋಗಾಥೆ ಇದು. ವೃತ್ತಿರಂಗಭೂಮಿ ಹಾಗೂ ಸಿನಿಮಾದ ಹಿರಿಯ ನಟಿ ಬಿ.ಜಯಮ್ಮ– ತಾಯಿ ಲಂಗಮ್ಮಳ ಪಾತ್ರದಲ್ಲಿ, ಸಮಕಾಲೀನ ಸಂದರ್ಭದ ಶ್ರೇಷ್ಠ ನಟರಲ್ಲೊಬ್ಬರಾದ ಎಂ.ಎಸ್ .ಜಹಾಂಗೀರ್– ಪಾಂಡುರಂಗನಾಗಿದ್ದರೆ, ಅವನ ಪತ್ನಿಯಾಗಿ ಅಪೇಕ್ಷಾ ಘಳಿಗಿ, ಅಡುಗೆ ಕೆಲಸದವಳಾಗಿ ಮೇಘಾಶ್ರೀ, ದಂಡಪಿಂಡಗಳಾಗಿ ಸತೀಶ್ಚಂದ್ರ, ಸಂಜಯ ಶಾಸ್ತ್ರಿ, ಪೆದ್ದು ತಂಗಿ ಶ್ರೀಲಕ್ಷ್ಮಿ –ಎಲ್ಲರ ಪಾತ್ರಗಳೂ ಸರಿಯಾಗಿ ಹೊಂದಿಕೆಯಾಗಿವೆ. ಫೈನಲ್ ಕಟ್ ಸಂಸ್ಥೆಯ ನಿರ್ವಹಣೆ ಹಾಗೂ ಬೊಂಬಾಟ್ ಭೋಜನ ಉಣಬಡಿಸುವುದರಲ್ಲಿ ಎಲ್ಲಿಯೋ ಕಳೆದು ಹೋಗಿಬಿಡುತ್ತೇನೆ ಎಂಬ ಭಯ ಬಂತಂತೆ ಸಿಹಿ ಕಹಿ ಚಂದ್ರು ಅವರಿಗೆ. ‘ಮೂಲತಃ ನಟನಾದ ನನ್ನನ್ನು ಜನ ಮರೆಯಬಾರದು ಎಂದು ಆಗಾಗ ‘ಪಾಂಡುರಂಗ ವಿಠಲ’ದಲ್ಲಿ ಕಾಣಿಸಿಕೊಳ್ತೀನಿ’ ಅಂತಾರೆ ಅವರು.



ರುದ್ರೇಶ್ ನಾಗಸಂದ್ರ

### ದಿನಕ್ಕೊಂದಲ್ಲ, ಎರಡು ಕಥೆ

ಎರಡೂ ಧಾರಾವಾಹಿಗಳಿಗೆ ದಿನಕ್ಕೊಂದು ಕಥೆ ಹೊಸೆಯುವವರು ಚಿತ್ರರಂಗದ ಹಿರಿಯ ಕಲಾವಿದ ರುದ್ರೇಶ್ ನಾಗಸಂದ್ರ. 1,800 ಕಥೆಗಳನ್ನು ಈಗಾಗಲೇ ಸೃಷ್ಟಿಸಿದ್ದಾರೆ. ಹೇಗೆ ಸಾಧ್ಯ? ‘ಓದುವ ಹವ್ಯಾಸ ಇದೆ. ದಿನಪತ್ರಿಕೆ, ಲೇಖನಗಳನ್ನು ಓದ್ತೀನಿ, ಟಿವಿ ವಾರ್ತೆಗಳನ್ನು ವೀಕ್ಷಿಸ್ತೀನಿ. ಯಾವುದಾದರೂ ಒಂದು ಎಳೆ ಹಿಡಿದು ಹಾಸ್ಯಲೇಪದ ರೂಪುರೇಷೆ ಹಾಕ್ತೀನಿ’ ಅಂತಾರೆ ರುದ್ರೇಶ್.



ಮುನಿ ಜನಪದ



## ತುಳು, ಕಂಪೆನಿ ನಾಟಕದ ಪ್ರತಿರೂಪ

ಕಂಪೆನಿ ನಾಟಕಗಳು ಹಾಗೂ ತುಳು ಹಾಸ್ಯ ನಾಟಕಗಳ ಪ್ರತಿರೂಪಗಳು ಹಾಸ್ಯ ಧಾರಾವಾಹಿಗಳು. ಅಥವಾ ಮತ್ತೊಂದು ಮಾಧ್ಯಮದಲ್ಲಿ ಅವುಗಳ ಮುಂದುವರಿಕೆ ಎನ್ನಬಹುದು. ಸಮಕಾಲೀನ ಸಂದರ್ಭದ ತಲ್ಲಣಗಳನ್ನು ಹಾಸ್ಯಕ್ಕೆ ಒಗ್ಗಿಸುವ ಕಲ್ಪನೆ ಕಥೆಗಾರನಿಗಿರಬೇಕು. ಹಾಗಾಗಿ ಕಥೆಗಾರನೂ ಇಲ್ಲಿ ಮುಖ್ಯ. ಆದರೆ ಕಥೆಯ ಎಳೆಯನ್ನು ನೀಡಿದ ನಂತರ ಅವನ ‘ಕಥೆ ಮುಗಿಯಿತು!’ ಯಾಕೆಂದರೆ ಕಥೆ ಇಲ್ಲಿ ನೆಪಕ್ಕಿರುತ್ತದೆ! ಸಂಭಾಷಣೆ, ನಟನಟಿಯರ ಹಾವಭಾವ, ವಿಶಿಷ್ಟ ಭಂಗಿ, ಪಂಚಿಂಗ್ ಡೈಲಾಗ್ ಗಳ ಮೇಲೆ ಬೆಳೆಯುತ್ತ ಹೋಗುತ್ತದೆ. ಮಾತಿಗೆ ಪ್ರತಿಮಾತುಗಳನ್ನು ತತ್ ಕ್ಷಣಕ್ಕೆ ಸೃಷ್ಟಿಸುವ ಸಂಭಾಷಣೆಕಾರ ಇಲ್ಲಿ ಎಷ್ಟು ಮುಖ್ಯವೋ, ಪ್ರತಿಭಾವಂತ ನಟನಟಿಯರೂ ಅಷ್ಟೇ ಅನಿವಾರ್ಯ. ಬರಹ ಮೀರಿದ ಮಾತುಗಳು ಸೃಷ್ಟಿಯಾಗುತ್ತಲೇ ಇರುತ್ತವೆ. ಆದರೆ ಕಥೆಗಾರ, ಸಂಭಾಷಣೆಕಾರ ಸಿಟ್ಟಾಗುವ ಸಂಭವ ಇಲ್ಲ. ಒಟ್ಟು ಹಾಸ್ಯವನ್ನು ಎಲ್ಲರೂ ಸೇರಿ ಬೆಳೆಸಿದ ಬಗೆಗೆ ಒಂದು ಸಹಮತ ಇರುತ್ತದೆ. ಎಲ್ಲರ ‘ವೇವ್‌ಲೆಂತ್’ ಒಂದೇ ಆಗಿದ್ದಾಗ ಯಾರು ಹೆಚ್ಚು ಯಾರು ಕಡಿಮೆ ಎಂಬ ಪ್ರಶ್ನೆ ಬರುವುದಿಲ್ಲ.

ಅದೇನೋ ಸರಿ, ಚಿತ್ರಕಥೆ, ಸಂಭಾಷಣೆ ಬರೆಯೋ ಲೇಖಕ ಇದ್ದಾರಲ್ಲ– ಅವರೇ ಕನ್ನಡ ಹಾಸ್ಯಸಾಹಿತ್ಯದ ದೈತ್ಯ ಎಂ.ಎಸ್.ನರಸಿಂಹಮೂರ್ತಿ. 2,001ರಲ್ಲಿ ತಮ್ಮ ಬ್ಯಾಂಕ್ ನೌಕರಿಯಿಂದ ಸ್ವಯಂ ನಿವೃತ್ತಿ ಪಡೆದು, ಸಿಹಿ ಕಹಿ ಚಂದ್ರು ಅವರಿಗಾಗಿಯೇ ಬರವಣಿಗೆಯ ಕಾರ್ಖಾನೆ ತೆರೆದವರು ಅವರು. ಫೈನಲ್ ಕಟ್‌ನ ಎಲ್ಲ ಹಾಸ್ಯ ಧಾರಾವಾಹಿಗಳಿಗೆ ನರಸಿಂಹಮೂರ್ತಿ ಅವರದೇ ಉತ್ಪಾದನೆ. ‘ಸುಧಾ’ ‘ಪ್ರಜಾವಾಣಿ’ ಪತ್ರಿಕೆಗಳಿಂದ ಹಾಸ್ಯ ಬರವಣಿಗೆ ಶುರುಮಾಡಿದ ಮೂರ್ತಿ ಸುಮಾರು ಆರು ಸಾವಿರ ಸಂಚಿಕೆಗೆ ಚಿತ್ರಕಥೆ, ಸಂಭಾಷಣೆಯನ್ನು ಸೃಷ್ಟಿಸಿದ್ದಾರೆ. ಇಂತಹದೊಂದು ದಾಖಲೆ ಭಾರತದಲ್ಲೇ

ತರರಂಪಂ

